ಇರುವ ಬರಹಗಾರನ ವ್ಯಕ್ತಿತ್ವದಲ್ಲಿ ವಿಷಮ ಮುಖವಾಡ ಇದ್ದರೆ ಅಂತಹ ಬರಹಗಾರ ಕಟ್ಟುವ ಶಿಷ್ಯವರ್ಗ ಸಮಾಜಕ್ಕೆ ವಿಷಬೀಜವಿದ್ದಂತೆ ಎಂದೇ ನನಗನಿಸುತ್ತಿದೆ. ಒಂದು ಕಾಲದಲ್ಲಿ ಇಂತಹ ವರ್ಗದ ಭಾಗವಾಗಿದ್ದಕ್ಕೆ ತನಗೆ ಯಾವತ್ತಿಗೂ ಕೊರಗು ಉಳಿದುಬಿಡುತ್ತದೆ ಎಂಬ ವಾಕ್ಯದಲ್ಲೇ ಲೇಖನ ಮುಗಿಸಿದ್ದಳು.

ಮಹಿಮಾ ಬರೆದಿದ್ದನ್ನ ಓದುವಾಗ ರಮಣಿಗೆ ಏನೂ ಅನಿಸಿರಲೇ ಇಲ್ಲ. ಅಷ್ಟರಮಟ್ಟಿಗೆ ಅವಳಿಗೆ ಜಗತ್ತು ಅರ್ಥವಾಗಿತ್ತು. ಇಂತಹ ಲೋಹಿತೇಶ್ವರರು ಇಲ್ಲದಿರುವ ಜಾಗ ಯಾವುದಾದರೂ ಇದೆಯೇ ಅನಿಸಿಬಿಟ್ಟಿತ್ತು.

ರಮಣಿ ಕವಿತೆ, ಸಣ್ಣ ಲೇಖನಗಳನ್ನು ಆಗೀಗ ಬರೆಯುತ್ತಿದ್ದಳಾದರೂ ಈ ಕ್ಷೇತ್ರಕ್ಕೆ ಬಾಗಿಲು ತೆರೆದಿದ್ದೇ ಅವಳ ಟೈಪಿಂಗ್ ನಿಪುಣತೆಗೆ. ಕಾಗುಣಿತ ಸ್ವಚ್ಛತೆಗೆ. ವರದಿಯ ಸುದ್ದಿಗಳನ್ನು ಟೈಪಿಸುತ್ತ ಅವಳು ಕೆಲವೊಮ್ಮೆ ಸಣ್ಣ ಪುಟ್ಟ ಕಾರ್ಯಕ್ರಮಗಳಿಗೆ ತೆರಳಿ ಸುದ್ದಿ ತರಬೇಕಾದ ಸಂದರ್ಭ ಒದಗುವುದಿತ್ತು. ಅಂತಹ ಸಂದರ್ಭದಲ್ಲಿ ಹಿರಿಯ ವರದಿಗಾರರು ಹಿರಿತನದ ಅಧಿಕಾರವನ್ನು ಅಧಿಕಾರಯುತವಾಗಿ ಉಪಯೋಗಿಸಿ ಅವಳ ಬರಹದಲ್ಲಿ ಹಾಗಲ್ಲ ಹೀಗೆ ಎಂದು ತಿದ್ದಿ... ಅದು ಸಂಪಾದಕರ ಬಳಿ ಹೋಗಿ ಅಲ್ಲಿ ಬೈಗುಳ ತಿಂದು ಮತ್ತೆರಡು ಬಾರಿ ಪುನರಾವರ್ತನೆಯಾದಾಗ ಅದು ತಾನು ಬರೆದ ಮೂಲ ಬರಹ ಅಲ್ಲ. ತಿದ್ದಿಕೊಟ್ಟದ್ದೆಂದು ಹೇಳಿದ್ದೇ ಅಪರಾಧವಾಗಿ ಆಫೀಸೊಳಗಿಂದ ಹೊರ ಹೋದ ಗಾಳಿಯಲ್ಲಿ ಇಷ್ಟಿಷ್ಟೇ ವಿಷ ಸೇರಲಾರಂಭಿಸಿತ್ತು. ಆಫೀಸೊಳಗಿನ ಕೆಲವೊಂದು ಕಣ್ಣುಗಳಲ್ಲಿ ಕುಹಕದ ಕಿಡಿ ಸಿಡಿಯಲಾರಂಭಿಸಿತ್ತು. ಹೊಟ್ಟೆಕಿಚ್ಚಿನ ಕೋಳಿಗಳಿಗೆ ಹಿಟ್ಟು ಮುಕ್ಕಿಸಬೇಕೆನ್ನುವಂತ ರೊಚ್ಚು ಅವಳ ಕೆಲಸದಲ್ಲಿ ಕಾಣತೊಡಗಿತ್ತು. ಅದೇ ಸಮಯಕ್ಕೆ ಸಾಹಿತ್ಯ ಪುರವಣಿ ವಿಭಾಗದ ಕೊರತೆ ತುಂಬಲು ಅವಳನ್ನು ಆ ವಿಭಾಗಕ್ಕೆ ಹಾಕಲಾಯಿತು. ಅದು ಇನ್ನೊಂದು ರೀತಿಯಲ್ಲಿ ಅವಳಿಗೆ ಬಲ ತುಂಬಿತೆಂದರೂ ಸರಿಯೇ. ಕವಿತೆಗಳ ಜೊತೆ ಪುಸ್ತಕ ಪರಿಚಯ ಬರೆಯತೊಡಗಿದವಳು ಓದುತ್ತಾ ಓದುತ್ತಾ ಆ ಬರಹಗಳ ಮಿತಿ, ವ್ಯಾಪ್ತಿಗಳ ವಿಶ್ಲೇಷಣೆಗೆ ತೊಡಗಿದ್ದಳು. ಟೈಪಿಸ್ಟ್ ಒಬ್ಬಳು ಬರೆಯುವಂತಿಲ್ಲ ಇದು. ಅವನೇ ಬರೆದುಕೊಟ್ಟು ಅವಳ ಹೆಸರು ಹಾಕಿಸಿದ್ದಾನೆ ಎಂಬಂತ ಕುಹಕಗಳು ಬೇರೆ ಬೇರೆ ದಿಕ್ಕಿನಿಂದ ಅವಳ ಕಿವಿಗೆ ಬೀಳಲಾರಂಭಿಸಿತ್ತು. ಒಂದು ದಿನ ತಡೆಯಲಾರದೆ ಸಂಪಾದಕರ ಬಳಿ ಅಳಲು ತೋಡಿಕೊಂಡು ಕೆಲಸ ಬಿಟ್ಟು ನಡೆಯಬೇಕೆಂದು ಹೋದವಳನ್ನು ಎದುರು ಕೂರಿಸಿ, 'ಹೊಟ್ಟೆಯೊಳಗೆ ಹುಳಿ ಜಾಸ್ತಿ ಇರುವ ವ್ಯಕ್ತಿ ಅಥವಾ ಗುಂಪು ಯಾವುದೇ ಇರಲಿ ತನ್ನದಲ್ಲದ... ತನಗೆ ಕಂಡರಾಗದ ಅಥವಾ ತನ್ನ ವಿರೋಧಿ ಎಂದುಕೊಂಡ ಬಳಗವನ್ನು ಅದರಲ್ಲೂ ಅದು ಹೆಂಗಸಾಗಿದ್ದರಂತೂ ಅವಳನ್ನು ನಾಶಗೊಳಿಸಲು; ಕುಗ್ಗಿಸಿ ಹಿಮ್ಮೆಟ್ಟಿಸಲಿರುವ ಏಕೈಕ ಮಹಾಸ್ತ್ರವೆಂದರೆ ಬಚ್ಚಲು ಬಾಯಿಯಿಂದ ಕೊಚ್ಚೆ ಕಾರುವುದು. ಇಂಥ ಮಾಟ, ಮಂತ್ರಕ್ಕೆ ಹೆದರಿದ್ರೆ ದೆವ್ವ ಜೀವ ಹಿಂಡಿ ಹಾಕೀತು' ಅನ್ನುತ್ತಾ ಪುಸ್ತಕವೊಂದನ್ನು ಎದುರಿಗಿಟ್ಟು ಮುಂದಿನ ವಾರದ ಪುರವಣಿಗೆ ಇದೇ ಪುಸ್ತಕ ಅನ್ನುತ್ತಾ ಆಗಷ್ಟೇ ಬಿಡುಗಡೆಯಾಗಿದ್ದ ಮಹಿಮಾಳ ಕೃತಿಯನ್ನೇ ಎದುರಿಗಿಟ್ಟಿದ್ದರು. ಅವಳು ಪುಸ್ತಕ ಹಿಡಿದು ಹೊರಟಾಗ, 'ಪುಸ್ತಕ ಓದುವಾಗ ಅವಮಾನದ ಸೇಡು ವಿಷವುಗುಳುವುದಿಲ್ಲ ತಾನೆ' ಎನ್ನಲು ಮರೆತಿರಲಿಲ್ಲ. ಆ ಪುಸ್ತಕ ಬಂದ ವರ್ಷದೊಳಗೇ ಒಂದು ಬೆಳಗಿನ ಹೊತ್ತಿಗೆ ಮಹಿಮಾ ರಮೇಶ್ ಹಾಗೂ ಲೋಹಿತೇಶ್ವರರ ಹುಳಿ ತೇಗಿನ ವಾಸನೆ ಎಂಟು ದಿಕ್ಕಿಗೂ ಹಬ್ಬಿದ್ದು. ಅದೇ ವಾರದ ಕೊನೆಯ ದಿನ ಮಹಿಮಾ ರಮೇಶ್, ರಮಣಿಯೊಂದಿಗೆ 'ಜನಾರ್ದನ' ಹೋಟೆಲಿನ ಮೂಲೆ ಮೇಜಿನ ಎದುರು ಬದುರು ಕುರ್ಚಿಯಲ್ಲಿ ಕುಳಿತು ಕಾಫಿ ಹೀರುತ್ತಾ ಲೋಹಿತೇಶ್ವರನ ಸದ್ಗುಣ, ದುರ್ಗುಣಗಳ ಪಟ್ಟಿ ಹೇಳುತ್ತಾ; ಅವನನ್ನು ದಾಟಿ ಹೋಗದಂತೆ ಮಾಯಕದ ತಡೆಗೋಡೆ ಕಟ್ಟುವ ಅವನ ಕೇಡಿನ ಬುದ್ಧಿವಂತಿಕೆಯನ್ನು ವಿಮರ್ಶಿಸುತ್ತಾ; ಅವನ ಬಳಗದ ಸಂಜೆ ಮೇಜಿನ ಬೌದ್ಧಿಕ ಚರ್ಚೆಯ ನಂತರ ಗಾಸಿಪ್ ಅಗರಬತ್ತಿ ಹೇಗೆ ಹಚ್ಚಲಾಗುತ್ತಿತ್ತು ಎಂಬುದನ್ನು ವಿವರಿಸುತ್ತಾ ರಮಣಿಗೆ ಕೆಂಬೂತ ಎಂದು ಹೆಸರು ಹುಟ್ಟಿದ ಸಂದರ್ಭ ವಿವರಿಸತೊಡಗಿದಾಗ ರಮಣಿ ಮೇಜಿನ ಮೇಲಿದ್ದ ಅವಳ ಮುಂಗೈ ಅದುಮಿ, 'ಮಹಿಮಾ, ನನಗೀಗ ಅದೆಲ್ಲ ಅಗತ್ಯ ಇದೆ ಅಂತ